ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1593(1852)
ಸದಸ್ಯರ ಹೆಸರು	:	ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	15-03-2022
ಉತ್ತರಿಸುವ ಸಚಿವರು	:	ನಗರಾಭಿವೃದ್ಧಿ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ನಗರದ ಅಮೃತಾ ಯೋಜನೆ ಫೇಸ್-1ರ ಅಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳು ಎಷ್ಟು; ಇದರ ಮೊತ್ತವೆಷ್ಟು; ಕಲಬುರಗಿ ನಗರದಲ್ಲಿ ಅಮೃತಾ ಯೋಜನೆ ಫೇಸ್-1 ರ ಅಡಿಯಲ್ಲಿ ಕಾಮಗಾರಿ ಅನುಷ್ಠಾನಗೊಂಡಿದ್ದು, ಇದರ ಅಂದಾಜು ಮೊತ್ತವೆಷ್ಟು ಹಾಗೂ ಇದರ ಟೆಂಡರ್ ಪ್ರಿಮಿಯಮ್ ಎಷ್ಟು; ಮತ್ತು ಖರ್ಚಾಗಿರುವ ಮೊತ್ತವೆಷ್ಟು;</td><td>

- ಕಲಬುರ್ಗಿ ನಗರದ ಅಮೃತ್ ಯೋಜನೆ ಫೇಸ್-01ರ ಅಡಿಯಲ್ಲಿ ಕಲಬುರ್ಗಿ ಮಹಾನಗರ ಪಾಲಿಕೆ ವತಿಯಿಂದ ರೂ.3.20 ಕೋಟಿಗಳ 5 **ಉದ್ಯಾನವನ ಮತ್ತು ಹಸಿರು ಜಾಗ ಅಭಿವೃದ್ಧಿ** ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.
- ಸದರಿ ಕಾಮಗಾರಿಗಳಿಗೆ ರಾಜ್ಯ ಉನ್ನತ ಮಟ್ಟದ ಸಂಚಾಲನಾ ಸಮಿತಿಯಲ್ಲಿ ಅನುಮೋದನೆ ನೀಡಲಾಗಿದೆ. ಸದರಿ ಕಾಮಗಾರಿಗಳ ಅಂದಾಜು ಮೊತ್ತ ರೂ.3.20 ಕೋಟಿಗಳು, ಟೆಂಡರ್ ಪ್ರೀಮಿಯಮ್ 'zero' (Nil).
- ಸದರಿ ಕಾಮಗಾರಿಗಳಿಗೆ ಮಹಾನಗರಪಾಲಿಕೆ ವತಿಯಿಂದ ಮಾಡಿರುವ ವೆಚ್ಚ ರೂ.3.18 ಕೋಟಿಗಳು. ವಿವರಗಳನ್ನು **ಅನುಬಂಧ-1** ರಲ್ಲಿ ನೀಡಿದೆ.
- ಕಲಬುರಗಿ ನಗರದ ಅಮೃತ್ ಯೋಜನೆಯ ಫೇಸ್-1 ರ ಅಡಿಯಲ್ಲಿ 02 ಸಂಖ್ಯೆಯ **ನೀರು ಸರಬರಾಜು ಮತ್ತು ಒಳಚರಂಡಿ** ಕಾಮಗಾರಿಗಳನ್ನು ಕೈಗೊಂಡಿದ್ದು, ವಿವರಗಳು ಈ ಕೆಳಗಿನಂತಿವೆ:

<table>
<tr><th>ಕ್ರ ಸಂ</th><th>ಕಾಮಗಾರಿ ವಿವರ</th><th>ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ)</th><th>ಗುತ್ತಿಗೆ ಮೊತ್ತ (ರೂ.ಕೋಟಿಗಳಲ್ಲಿ)</th><th>ಟೆಂಡರ್ ಪ್ರೀಮಿಯಂ</th><th>ಖರ್ಚಾಗಿರುವ ಮೊತ್ತ (ರೂ. ಕೋಟಿಗಳಲ್ಲಿ)</th></tr>
<tr><td>1</td><td>ಒಳಚರಂಡಿ ಯೋಜನೆ</td><td>(CAPEX)- 156.80
(OPEX) - 23.65
ಒಟ್ಟು- 180.45</td><td>(CAPEX)-174.80
(OPEX)-17.90
ಒಟ್ಟು- 192.70</td><td>ಶೇ. 7 ರಷ್ಟುಹೆಚ್ಚಿಗೆ</td><td>156.20</td></tr>
<tr><td>2</td><td>ನೀರು ಸರಬರಾಜು ಯೋಜನೆ (ಹೆಚ್ಚುವರಿ ಅನುದಾನ)</td><td>(CAPEX) 12.36
(OPEX) 0.47
ಒಟ್ಟು 12.77</td><td>(CAPEX) 12.73
(OPEX) 0.26
ಒಟ್ಟು 12.99</td><td>ಶೇ.4.90 ರಷ್ಟುಹೆಚ್ಚಿಗೆ</td><td>12.41</td></tr>
</table>
</td></tr>
<tr><td>ಆ)</td><td>ಕಲಬುರಗಿ ನಗರದಲ್ಲಿ ಅಮೃತಾ ಯೋಜನೆ ಅಡಿಯಲ್ಲಿ ಟೆಂಡರ್‌ಗಿಂತ ಹೆಚ್ಚುವರಿ ಕಾಮಗಾರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದರ ಮೊತ್ತವೆಷ್ಟು; ಕಲಬುರಗಿ ನಗರದಲ್ಲಿ ಅಮೃತಾ ಯೋಜನೆ</td><td>

- ಅಮೃತ್ 1.0 ಯೋಜನೆಯಡಿ ಕಲಬುರ್ಗಿ ಮಹಾನಗರ ಪಾಲಿಕೆಯಿಂದ ಕೈಗೊಂಡಿರುವ 5 **ಉದ್ಯಾನವನ ಮತ್ತು ಹಸಿರು ಜಾಗ ಅಭಿವೃದ್ಧಿ** ಕಾಮಗಾರಿಗಳಲ್ಲಿ ಟೆಂಡರ್ ಅಂದಾಜು ಮೊತ್ತಕ್ಕಿಂತ ಹೆಚ್ಚುವರಿ ಕಾಮಗಾರಿ ಮಾಡಿರುವುದಿಲ್ಲ.
- ಕಲಬುರಗಿ ನಗರದ ಅಮೃತ್ ಯೋಜನೆಯ ಫೇಸ್-1ರ ಅಡಿಯಲ್ಲಿ **ನೀರು ಸರಬರಾಜು ಮತ್ತು ಒಳಚರಂಡಿ** ಕಾಮಗಾರಿಗಳನ್ನು ಕೈಗೊಂಡಿದ್ದು, ಈ ಯೋಜನೆಗಳಿಗೆ ಖರ್ಚಾಗಿರುವ ಮೊತ್ತವು ಟೆಂಡರ್ ಮೊತ್ತಗಿಂತ ಹೆಚ್ಚಾಗಿರುವುದಿಲ್ಲ. ವಿವರಗಳು ಈ ಕೆಳಗಿನಂತಿವೆ.

</td></tr>
</table>

<table>
<tr><td></td><td>ಅಡಿಯಲ್ಲಿ ಹೆಚ್ಚುವರಿ ಕಾಮಗಾರಿಗೆ ಅನುಮೋದನೆ ಕೊಟ್ಟಿರುವ ತತ್ಸಮಾನ ಅಧಿಕಾರಿಗಳು ಯಾರು; ಹೆಸರಿನೊಂದಿಗೆ ವಿವರ ನೀಡುವುದು)</td><td>(ರೂ.ಕೋಟಿಗಳಲ್ಲಿ)
<table>
<tr><th>ಕ್ರ ಸಂ</th><th>ಕಾಮಗಾರಿ ವಿವರ</th><th>ಟೆಂಡರ್ ಮೊತ್ತ</th><th>ಖರ್ಚಾಗಿರುವ ಮೊತ್ತ</th><th>ನಿವ್ವಳ ಹೆಚ್ಚುವರಿ ಮೊತ್ತ</th></tr>
<tr><td>1</td><td>ಒಳ ಚರಂಡಿ ಯೋಜನೆ</td><td>192.70</td><td>156.20</td><td>ಇಲ್ಲ</td></tr>
<tr><td>2</td><td>ನೀರು ಸರಬರಾಜು ಯೋಜನೆ (ಹೆಚ್ಚುವರಿ ಅನುದಾನ)</td><td>12.99</td><td>12.41</td><td>ಇಲ್ಲ</td></tr>
</table></td></tr>
<tr><td>ಇ)</td><td>ಕಲಬುರಗಿ ನಗರದ ಈ ಅಮೃತಾ ಯೋಜನೆ ಅಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳಲ್ಲಿ ಎಲ್ಲೆಲ್ಲಿ ಕಳಪೆ ಮಟ್ಟದ ಕಾಮಗಾರಿಯಾಗಿದೆ; ಕಳಪೆ ಕಾಮಗಾರಿಗಳನ್ನು ಪುನರ್ ನಿರ್ಮಾಣ ಮಾಡಲಾಗಿದೆಯೇ; ಇಲ್ಲವೆ; (ವಿವರ ನೀಡುವುದು)</td><td>• ಕಲಬುರ್ಗಿ ನಗರದ ಅಮೃತ್ ಯೋಜನೆ ಫೇಸ್-1ರ ಅಡಿಯಲ್ಲಿ ಕಲಬುರ್ಗಿ ಮಹಾನಗರ ಪಾಲಿಕೆಯಿಂದ 5 ಉದ್ಯಾನವನ ಮತ್ತು ಹಸಿರು ಜಾಗ ಅಭಿವೃದ್ಧಿ ಕಾಮಗಾರಿಗಳನ್ನು ಉತ್ತಮ ಗುಣಮಟ್ಟದಿಂದ ಕೈಗೊಳ್ಳಲಾಗಿದ್ದು, ಯಾವುದೇ ಪುನರ್ ನಿರ್ಮಾಣ ಮಾಡಲಾಗಿರುವುದಿಲ್ಲ.

• ಕಲಬುರಗಿ ನಗರದಲ್ಲಿ ಅಮೃತ್ ಯೋಜನೆಯಡಿಯಲ್ಲಿ ಕೈಗೊಂಡ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಗುಣಮಟ್ಟವನ್ನು ಮೂರನೇ ತಪಸಣಾ ಸಂಸ್ಥೆರವರಿಂದ ಎಲ್ಲಾ ಹಂತದಲ್ಲಿಯು ಪರಿಶೀಲನೆ/ ಪರಿವಿಕ್ಷಣೆಗೆ ಒಳಪಡಿಸಲಾಗಿರುತ್ತದೆ. ಸದರಿ ಕಾಮಗಾರಿಗಳ ಗುಣಮಟ್ಟದ ಕುರಿತು ಯಾವುದೇ ದೂರುಗಳು ಈವರೆವಿಗೂ ಬಂದಿರುವುದಿಲ್ಲ, ಎಲ್ಲಿಯೂ ಕಳಪೆ ಮಟ್ಟದ ಕಾಮಗಾರಿಯಾಗಿರುವುದಿಲ್ಲ. ಆದ್ದರಿಂದ, ಕಾಮಗಾರಿಗಳನ್ನು ಪುನರ್ ನಿರ್ಮಾಣ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.</td></tr>
<tr><td>ಈ)</td><td>ಅಮೃತಾ ಫೇಸ್-1 ರಲ್ಲಿ ಕಲ್ಯಾಣ ಕರ್ನಾಟಕ ಜಿಲ್ಲೆಗಳಿಗೆ ತೆಗೆದುಕೊಂಡ ಕಾಮಗಾರಿಗಳು ಯಾವುವು; ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ; (ಪೂರ್ಣ ಮಾಹಿತಿ ನೀಡುವುದು)</td><td>• ಅಮೃತ್ ಫೇಸ್-1 ರಲ್ಲಿ ಕಲ್ಯಾಣ ಕರ್ನಾಟಕ ಜಿಲ್ಲೆಗಳ ಬಳ್ಳಾರಿ ಮಹಾನಗರಪಾಲಿಕೆ, ಕಲಬುರ್ಗಿ ಮಹಾನಗರಪಾಲಿಕೆ, ಬೀದರ್ ನಗರಸಭೆ, ಗಂಗಾವತಿ ನಗರಸಭೆ, ಹೊಸಪೇಟೆ ನಗರಸಭೆ, ರಾಯಚೂರು ನಗರಸಭೆಗಳು ಯೋಜನೆಯಡಿ ಆಯ್ಕೆಯಾಗಿದ್ದು, ಯೋಜನೆಯಡಿ ಕೈಗೊಂಡ ಉದ್ಯಾನವನ ಮತ್ತು ಹಸಿರು ಜಾಗ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.

• ಸದರಿ ಕಾಮಗಾರಿಗಳಿಗೆ ರಾಜ್ಯ ಮಟ್ಟದ ಉನ್ನತ ಸಂಚಾಲನಾ ಸಮಿತಿಯಿಂದ ಹಾಗೂ ಕೇಂದ್ರ ಸರ್ಕಾರದ Apex ಸಮಿತಿಯಿಂದ ಅನುಮೋದನೆ ಪಡೆಯಲಾಗಿರುತ್ತದೆ.

• ನಗರ ಸ್ಥಳೀಯ ಸಂಸ್ಥೆಗಳ ವತಿಯಿಂದ ಕೈಗೊಂಡ 50 ಕಾಮಗಾರಿಗಳಲ್ಲಿ 45 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

• ಅಮೃತ್ ಫೇಸ್-1ರಲ್ಲಿ ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ, ನೀರು ಸರಬರಾಜು ಮತ್ತು ಒಳಚರಂಡಿಯ ಒಟ್ಟು 19 ಕಾಮಗಾರಿಗಳನ್ನು ಕೈಗೊಂಡಿದ್ದು, 12 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ, ಬಾಕಿ 07 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಕಾಮಗಾರಿಗಳ ವಿವರವನ್ನು ಅನುಬಂಧ-2 ರಲ್ಲಿ ನೀಡಿದೆ.</td></tr>
<tr><td>ಉ)</td><td>ಅಮೃತಾ ಫೇಸ್-2 ಸದರಿ ಯೋಜನೆಯಡಿಯಲ್ಲಿ</td><td>• ಅಮೃತ್-2.0 ಯೋಜನೆಯಡಿ ಕಲ್ಯಾಣ ಕರ್ನಾಟಕ ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇಲ್ಲಿಯವರೆವಿಗೂ ಯಾವುದೇ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.</td></tr>
</table>

	ಕಲ್ಯಾಣ ಕರ್ನಾಟಕ ಜಿಲ್ಲೆಗಳಿಗೆ ತೆಗೆದುಕೊಂಡ ಕಾಮಗಾರಿಗಳು ಯಾವುವು; ಸರ್ಕಾರ ಈ ಕಾಮಗಾರಿಗೆ ಅನುಮೋದನೆ ನೀಡಿದೆಯೇ; (ನೀಡಿದ್ದಲ್ಲಿ ಸಂಪೂರ್ಣ ಮಾಹಿತಿ ನೀಡುವುದು)	• ಕರ್ನಾಟಕ ರಾಜ್ಯದಲ್ಲಿ ಅಮೃತ್ 2.0 ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅಗತ್ಯ ಕ್ರಮಗಳನ್ನು ವಹಿಸಲಾಗುತ್ತಿದೆ.

ಸಂಖ್ಯೆ:ನಅಇ 69 ಸಿಎಸ್ಎಸ್ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

ಅನುಬಂಧ-1

Workwise Progress of AMRUT AMRUT Report

Date=10.03.2022

Rs. in Lakhs

S.No	Work Code	Work Name	Contractor/Entrusted Agency Name	Tender Premium	Commencement Date	Target Date	Work Completion Date	Contract Amount	Estimate Cost	Expenditure Cost	Work Status
1	PGS/921/PGS/1	Development of children friendly park at Akkamahadevi KHB colony	Anil prasad pandey	3.99% Below	02/01/2017	01/05/2017	29/04/017	74.94	80	83.86	Work Completed
2	PGS/921/PGS/2	Development of children park at Dhanavantry colony	Anil prasad pandey	5.00% Below	26/10/2017	25/01/2018	16/07/018	45.62	50	49.32	Work Completed
3	PGS/921/PGS/3	Development of children park at Mansabdar colony.	Anil prasad pandey	(0%) DSR rate	26/10/2017	25/01/2018	16/10/018	57.7	60	57.68	Work Completed
4	PGS/921/PGS/4	Development of Park at Revanna Siddeshwar	Anil prasad pandey	(0%) DSR rate	26/10/2017	25/01/2017	20/10/018	36.57	37	31.44	Work Completed
5	PGS/921/PGS/5	Development of Park at Swastik nagar	Anil prasad pandey	1.25% Below	19/12/2017	18/03/2018	04/12/018	89.76	93	90.5	Work Completed
							Total	304.59	320	312.8	

For Executive Engineer
Kalaburagi Mahanagar Palike
KALABURAGI.

ಅನುಬಂಧ-2

ಅನುಬಂಧ - 2

ರೂ. ಕೋಟಿಗಳಲ್ಲಿ

ಕ್ರ ಸಂ	ಕಾಮಗಾರಿ ವಿವರ	ಅಂದಾಜು ಮೊತ್ತ	ಫೆಬ್ರವರಿ 2022ರ ಅಂತ್ಯಕ್ಕೆ ವೆಚ್ಚ
	ಪೂರ್ಣಗೊಂಡ ಕಾಮಗಾರಿಗಳು		
1	ಕಲಬುರಗಿ ನಗರಕ್ಕೆ ನೀರು ಸರಬರಾಜು ಯೋಜನೆ (ಹೆಚ್ಚುವರಿ ಅನುದಾನ)	12.36	12.30
2	ರಾಯಚೂರು ನಗರಕ್ಕೆ ನೀರು ಸರಬರಾಜು ಯೋಜನೆ	57.00	47.06
3	ಗಂಗಾವತಿ ನಗರಕ್ಕೆ ನೀರು ಸರಬರಾಜು ಯೋಜನೆ	25.00	23.63
4	ಕಲಬುರಗಿ ನಗರಕ್ಕೆ ಒಳಚರಂಡಿ ಯೋಜನೆ	156.80	156.09
5	ಬೀದರ್ ನಗರಕ್ಕೆ ಒಳಚರಂಡಿ ಯೋಜನೆ	98.29	98.14
6	ಬಳ್ಳಾರಿ ನಗರಕ್ಕೆ ಒಳಚರಂಡಿ ಯೋಜನೆ	87.75	97.20
7	ಹೊಸಪೇಟೆ ನಗರಕ್ಕೆ ಒಳಚರಂಡಿ ಯೋಜನೆ	91.00	58.70
8	ರಾಯಚೂರು ನಗರಕ್ಕೆ ಒಳಚರಂಡಿ ಯೋಜನೆ	90.13	84.18
9	ರಾಯಚೂರು ನಗರಕ್ಕೆ ಒಳಚರಂಡಿ ಯೋಜನೆ (ಹೆಚ್ಚುವರಿ ಅನುದಾನ)	16.42	13.20
10	ಗಂಗಾವತಿ ನಗರಕ್ಕೆ ಒಳಚರಂಡಿ ಯೋಜನೆ	36.75	29.74
11	ಗಂಗಾವತಿ ನಗರಕ್ಕೆ ಒಳಚರಂಡಿ ಯೋಜನೆ (ಹೆಚ್ಚುವರಿ ಅನುದಾನ-1)	14.68	12.92
12	ಗಂಗಾವತಿ ನಗರಕ್ಕೆ ಒಳಚರಂಡಿ ಯೋಜನೆ – 14 ಎಮ್.ಎಲ್.ಡಿ ಎಸ್.ಟಿ.ಪಿ (ಹೆಚ್ಚುವರಿ ಅನುದಾನ-2)	2.00	1.55
	ಪ್ರಗತಿಯಲ್ಲಿರುವ ಕಾಮಗಾರಿಗಳು		
13	ಬಳ್ಳಾರಿ ನಗರಕ್ಕೆ ನೀರು ಸರಬರಾಜು ಯೋಜನೆ	70.00	47.62
14	ಹೊಸಪೇಟೆ ನಗರಕ್ಕೆ ನೀರು ಸರಬರಾಜು ಯೋಜನೆ	52.00	35.33
15	ಬೀದರ್ ನಗರಕ್ಕೆ ಒಳಚರಂಡಿ ಯೋಜನೆ (ಹೆಚ್ಚುವರಿ ಅನುದಾನ)	57.79	40.06
16	ಬೀದರ್ ನಗರಕ್ಕೆ ಒಳಚರಂಡಿ ಯೋಜನೆ (ಉಳಿತಾಯ)	17.71	7.35
17	ಬಳ್ಳಾರಿ ನಗರಕ್ಕೆ ಒಳಚರಂಡಿ ಯೋಜನೆ (ಹೆಚ್ಚುವರಿ ಅನುದಾನ)	20.69	10.90
18	ಹೊಸಪೇಟೆ ನಗರಕ್ಕೆ ಒಳಚರಂಡಿ ಯೋಜನೆ (ಹೆಚ್ಚುವರಿ ಅನುದಾನ)	15.64	2.87
19	ರಾಯಚೂರು ನಗರಕ್ಕೆ ಒಳಚರಂಡಿ ಯೋಜನೆ (ಉಳಿತಾಯ)	9.67	4.73

K.L. Srishekhar

ಮುಖ್ಯ ಅಭಿಯಂತರರು (ವಿ ಮತ್ತು ಉ),
ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು.